International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

# ಕರ್ನಾಟಕ ರಾಜ್ಯದಲ್ಲಿ ಹಣ್ಣು ಮತ್ತು ತರಕಾರಿ ಉತ್ಪನ್ನ ಹಾಗೂ ಮಾರುಕಟ್ಟೆಯ ಮೇಲೆ ಕೊರೊನಾ–19 ಸಾಂಕ್ರಾಮಿಕ ರೋಗದ ಪರಿಣಾಮ: ಒಂದು ವಿಶ್ಲೇಷಣೆ

**ಡಾ. ಈ. ತಿಪ್ಪೇಸ್ವಾಮಿ**
**ಸಂಯೋಜಕರು ಮತ್ತು ಸಹ ಪ್ರಾಧ್ಯಾಪಕರು**
**ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ ಫೀ. ಮಾ. ಕೆ.ಎಂ. ಕಾರ್ಯಪ್ಪ ಕಾಲೇಜು**
**(ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜು)**
**ಮಡಿಕೇರಿ, ಕೊಡಗು ಜಿಲ್ಲೆ–571201.**

**ಸಾರಾಂಶ**

ನಮ್ಮ ದೇಶದ ಆರ್ಥಿವ್ಯವಸ್ಥೆಯ ಬೆಳವಣಿಗೆಯು ಕೃಷಿ ವಲಯದಲ್ಲಿನ ಬೆಳವಣಿಗೆ ಅವಲಂಭಿಸಿದೆ ಎಂದರೆ ತಪ್ಪಾಗಲಾರದು. ಶೇ.56ರಷ್ಟು ಜನರಿಗೆ ಉದ್ಯೋಗ ಮತ್ತು ಶೇ.14ರಷ್ಟು ವಂತಿಕೆಯನ್ನು ರಾಷ್ಟ್ರೀಯ ಆದಾಯಕ್ಕೆ ಕೊಡುಗೆ ನೀಡುತ್ತಿದೆ. ಇತ್ತೀಚಿನ ದಿನಗಳಲ್ಲಿ ಕೃಷಿಯನ್ನು ಒಂದು ವೃತ್ತಿಯನ್ನಾಗಿ ನಿರ್ವಹಿಸುವ ಮನೋಭಾವನೆಯು ರೈತರಲ್ಲಿ ಕಂಡುಬರುತ್ತಿದೆ. ಏಕೆಂದರೆ, ನಮ್ಮ ದೇಶದಲ್ಲಿ ಹೆಚ್ಚಿನ ರೈತರು ಆಹಾರ ಬೆಳೆಗಳಿಗೆ ಬದಲಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಬಹಳ ಆಸಕ್ತಿ ತೋರುತ್ತಿರುವುದು ಪ್ರಸ್ತುತ ಅಂಕಿ–ಅಂಶಗಳಿಂದ ತಿಳಿದುಬರುತ್ತದೆ. ಇಂತಹ ವಾಣಿಜ್ಯ ಬೆಳೆಗಳು ರೈತರ ಆದಾಯದಲ್ಲಿ ಅತಿ ಹೆಚ್ಚು ಏರಿಳಿತಗಳಿಗೆ ಕಾರಣವಾಗುತ್ತವೆ. ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಹಣ್ಣು ಮತ್ತು ತರಕಾರಿ ಉತ್ಪನ್ನ ಹಾಗೂ ಅವುಗಳ ಮಾರುಕಟ್ಟೆ ಮೇಲೆ ಕೊರೋನಾ–19 ಸಂಕ್ರಾಮಿಕ ರೋಗದ ಪರಿಣಾಮಗಳ ಕುರಿತು ಪ್ರಸ್ತುತ ಸಂಶೋಧನ ಲೇಖನದಲ್ಲಿ ಚರ್ಚಿಸಲಾಗಿದೆ. ಇದು ಸಂಪೂರ್ಣವಾಗಿ ಮಾಧ್ಯಮಿಕ ಆಕರಗಳನ್ನು ಆದರಿಸಿ ಚರ್ಚಿಸಲಾದ ಲೇಖನವಾಗಿದೆ. ಹೂಗಳ ಉತ್ಪಾದನೆಯು ಮೂರು ಅವಧಿಯಲ್ಲಿ ಏರಿಕೆಯನ್ನು ಕಂಡಿದೆ ಅದರೆ ಬೆಳೆಯ ವಿಸ್ತೀರ್ಣ ಮಾತ್ರ ಮೊದಲ ಎರಡು ಅವಧಿಯಲ್ಲಿ ಹೆಚ್ಚಾಗಿದ್ದರೂ ಕೊನೆಯ ಅವಧಿಯಲ್ಲಿ (2018–2019) ಅದು ಇಳಿಮುಖವಾಗಿದೆ. ಆಂದರೆ ತರಕಾರಿ ಮತ್ತು ಹೂ ಬೆಳೆಯುವ ಪ್ರದೇಶವು ಮೊದಲ ಎರಡು ಅವಧಿಯಲ್ಲಿ ಹೆಚ್ಚಾಗಿದ್ದು 2018–2019 ರಲ್ಲಿ ಕಡಿಮೆಯಾಗಿದೆ, ಅದರೂ ಅವುಗಳೇರಡರ ಉತ್ಪಾದನೆ ಮಾತ್ರ ಎಲ್ಲಾ ಅವಧಿಯಲ್ಲಿ ಹೆಚ್ಚಾಗಿದೆ. ಪ್ರಾಯಶ್ಯ, ಉತ್ತಮ ತಳಿಯ ತರಕಾರಿ ಬೀಜಗಳು, ರಸಾಯನಿಕ ಗೊಬ್ಬರ ಮತ್ತು ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡಿರುವುದರಿಂದ ತರಕಾರಿ ಮತ್ತು ಹೂಗಳ ಉತ್ಪಾದನೆ ಹೆಚ್ಚಾಗಿರುವುದಾಗಿ ಅಭಿಪ್ರಾಯಿಸಬಹುದಾಗಿದೆ. 2012–2013 ರಿಂದ 2016–2017ರ ವರೆಗೆ ಹಣ್ಣುಗಳ ಬೆಳೆಯುವ ಪ್ರದೇಶವು ಏರಿಕೆ ಕಂಡಿದೆ, ಆದರೆ 2018–2019ರ ಅವಧಿಯಲ್ಲಿ ಅದು ಇಳಿಮುಖವಾಗಿರುವುದನ್ನು ಕಾಣಬಹುದು. ಮೇಲಾಗಿ ಮೊದಲ ಎರಡು ಅವಧಿಗಳಲ್ಲಿ ಉತ್ಪಾದನೆಯು ಅಧಿಕವಾದರೂ ಸಹ ಅದು 2018–2019 ರ ಅವಧಿಯಲ್ಲಿ ಇಳಿಕೆಯನ್ನು ಕಂಡಿದೆ. ಅಂದರೆ ಕರ್ನಾಟಕ ರಾಜ್ಯದಲ್ಲಿ ಅಕಾಲಿಕ ಮಳೆ ಮತ್ತು ಬೆಲೆಗಳಲ್ಲಿನ ಅನಿಶ್ಚಿತತೆಯು ಹಣ್ಣುಗಳ ಉತ್ಪಾದನೆ ಮತ್ತು ಅವುಗಳ ಬೆಳೆಯುವ ಪ್ರದೇಶದಲ್ಲಿ ಹೆಚ್ಚು ಏರಿಳಿತಗಳಾಗಿರುವುದಕ್ಕೆ ಕಾರಣಗಳೆಂದು ಗುರುತಿಸಬಹುದಾಗಿದೆ. ಇದೇ ರೀತಿಯ ಪರಿಣಾಮಗಳನ್ನು ತರಕಾರಿ ಮತ್ತು ಅವುಗಳ ಉತ್ಪನ್ನ ಹಾಗೂ ಹೂವು ಬೆಳೆ ಬೆಳೆಯುವ ಪ್ರದೇಶವಾರು ವ್ಯತ್ಯಾಸವಾಗಿರುವುದನ್ನು ಗಮನಿಸಬಹುದು. ಹೀಗೆ ಕರ್ನಾಟಕ ರಾಜ್ಯದಲ್ಲಿ ಹಣ್ಣು ಮತ್ತ ತರಕಾರಿ ಬೆಳೆ ಬೆಳೆಯುವ ಪ್ರದೇಶದಲ್ಲಿ ವ್ಯತ್ಯಾಸ ಕಂಡುಬಂದರೂ ನಂತರದ ದಿನಗಳಲ್ಲಿ ಕೊರೋನಾ–19 ಸಂಕ್ರಾಮಿಕವು ಈ ಬೆಳೆಗಳು ಮತ್ತು ಅವುಗಳ ಮಾರಾಟದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿರುವುದಲ್ಲಿ ಯಾವುದೇ ಸಂಶಯವಿರುವುದಿಲ್ಲ.

**ಪೀಠಿಕೆ**

ಇಪ್ಪತ್ತೊಂದನೆ ಶತಮಾನದ ಮೊದಲ ದಶಕದಲ್ಲಿ ಭಾರತದ ಆರ್ಥಿಕ ವ್ಯವಸ್ಥೆಯು ಕೃಷಿ ಆಧಾರಿತ ಅರ್ಥವ್ಯವಸ್ಥೆ ಎಂಬ ಹಣೆಪಟ್ಟಿಯನ್ನು ಕಳಚಿಕೊಂಡು ಕೈಗಾರಿಕೆ ಮತ್ತು ವಾಣಿಜ್ಯ ವಲಯ ಆಧಾರಿತ ಅರ್ಥವ್ಯವಸ್ಥೆಯಾಗಿ ಬದಲಾಗುತ್ತಿದೆ. ಈ ಮಾತು 2014ರಿಂದ ಹೆಚ್ಚು ಜನಪ್ರಿಯವಾಗಿದೆ. ಇದಕ್ಕೆ ಪುಷ್ಠಿ ನೀಡುವಂತೆ, ಪ್ರಸ್ತುತ ಸರ್ಕಾರವು ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳು ಸಾಕ್ಷಿಯಾಗಿವೆ. ಅವುಗಳೆಂದರೆ, ಕೌಶಲ್ಯ ಭಾರತ, ನವ್ರೋಧ್ಯಮ ಭಾರತ, ಭಾರತದಲ್ಲೇ ತಯಾರಿಸಿ ಇತ್ಯಾದಿಗಳು. ಆದಾಗ್ಯೂ ನಮ್ಮ ದೇಶದ ಶೇಕಡ 54.6 ಕ್ಕಿಂತ ಹೆಚ್ಚು ಜನರಿಗೆ ಕೃಷಿ ಮತ್ತು ಅದರ ಸಂಬಂಧಿ ವಲಯವು ಜೀವನಾಧಾರಕ್ಕೆ ಆಸರೆಯಾಗಿರುವುದರ ಜೊತೆಗೆ ಅತಿ ಹೆಚ್ಚು ಜನರಿಗೆ ಉದ್ಯೋಗವಕಾಶವನ್ನು ಕಲ್ಪಿಸಿಕೊಟ್ಟಿದೆ (2011ರ ಜನಗಣತಿ ವರಧಿ). ಕೃಷಿ ಮತ್ತು ಕೃಷಿ ಸಂಬಂಧಿ ವಲಯವು ಒಟ್ಟು ದೇಶೀಯ ಉತ್ಪನ್ನಕ್ಕೆ(ಜಿಡಿಪಿ) ನೀಡುವ ಕೊಡುಗೆಯು ಶೇಕಡ 51.9 (1950–51 ಸಿಎಸ್‌ಓ) ರಿಂದ ಶೇಕಡ 17.8 (2019–2020)ಕ್ಕೆ ಕುಸಿದಿರುವುದಲ್ಲದೆ ಕೃಷಿ ವಲಯದ ಮೇಲಿನ ಅವಲಂಬನೆಯು ಇದೇ ಅವಧಿಯಲ್ಲಿ ಶೇಕಡ 69.7 (1951) ರಿಂದ ಶೇಕಡ 54.6 (2011) ಕ್ಕೆ ಇಳಿಕೆ ಕಂಡಿದೆ (Agricultural Statistics at a Glance 2019). ಆದಾಗ್ಯೂ ಸಹ ಆರ್ಥಿಕತೆಯ ಇತರ ವಲಯಗಳಿಗೆ ಹೋಲಿಕೆ ಮಾಡಿದರೆ ಕೃಷಿ ವಲಯವು ಅತಿ ಹೆಚ್ಚು ಜನರಿಗೆ ಉದ್ಯೋಗವನ್ನು ಒದಗಿಸಿದೆ. ಮೇಲಾಗಿ ಕೋವಿಡ್–19 ಸಾಂಕ್ರಾಮಿಕ ರೋಗವು 2020ರಿಂದ ವ್ಯಾಪಕವಾಗಿ ನಮ್ಮ ದೇಶದಲ್ಲಿ ಹರಡುತ್ತಿದ್ದರೂ ಇತರ ವಲಯಗಳ ಮೇಲೆ ಅದು ಬೀರಿದಂತಹ ಪರಿಣಾಮವು (ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು) ಕೃಷಿ ವಲಯದ ಮೇಲೆ ಅಂತಹ ಪ್ರತಿಕೂಲ ಪರಿಣಾಮವನ್ನುಂಟು ಮಾಡಿರುವುದಿಲ್ಲ. ಕೃಷಿ ವಲಯವು ಸಮೃದ್ಯವಾಗಿ ಬೆಳೆದರೆ ನಮ್ಮ ದೇಶದ ಆರ್ಥಿಕತೆಯ ಬುನಾಧಿ ಸುಭದ್ರವಾಗಿರುವುದರೊಂದಿಗೆ ಅರ್ಥವ್ಯವಸ್ಥೆಯೂ ಕೂಡ ಸಮೃದ್ಧವಾಗಿ ಬೆಳವಣಿಗೆಯನ್ನು ಹೊಂದುತ್ತದೆ. ಆದ್ದರಿಂದ ಭಾರತದ ಆರ್ಥಿಕತೆಯಲ್ಲಿ ಕೃಷಿ ವಲಯವು ಅತ್ಯಂತ ಮಹತ್ವ ಸ್ಥಾನವನ್ನು ಪಡೆದಿದೆ ಎಂಬುದರಲ್ಲಿ ಸಂದೇಹವಿರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಕೃಷಿ ಕ್ಷತ್ರ ಮತ್ತು ಕೃಷಿಯಲ್ಲಿ ನಿರತವಾದವರು ಹಲವಾರು ಬದಲಾವಣೆಗಳಿಗೆ ತಮ್ಮನ್ನು ತಾವೇ ತರೆದುಕೊಂಡಿರುತ್ತಾರೆ. ರೈತರು ಕೃಷಿ ಚಟುವಟಿಕೆಗಳನ್ನು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ವೈಜ್ಞಾನಿಕವಾಗಿ ಕೈಗೊಳ್ಳುವುತ್ತಿರುವುದು ದೇಶದ ಉದ್ದಗಲಕ್ಕೂ ಸಹಜವಾಗಿ ಗೋಚರಿಸುತ್ತಿದೆ. ಹಾಗಾಗಿ ನಮ್ಮ ದೇಶದ ಪ್ರತಿಯೊಬ್ಬ ರೈತನ ಆದಾಯವು ಚಾಲ್ತಿ ಬೆಲೆಗಳಲ್ಲಿ ರೂ. 12365 (1993–1994) ರಿಂದ ರೂ.120193 (2015–2016) ಗಳಿಗೆ ಏರಿಕೆ ಕಂಡಿರುತ್ತದೆ. ಇದೇ ಅವಧಿಯಲ್ಲಿ ನೈಜ ಬೆಲೆಗಳಲ್ಲಿ ಪ್ರತಿಯೊಬ್ಬ ರೈತನ ಆದಾಯವು ರೂ.2110 ರಿಂದ ರೂ. 44027ಗಳಿಗೆ ಹೆಚ್ಚಾಗಿದೆ (ವಾರ್ಷಿಕ ವರಧಿ 2020–2021, ಭಾರತ ಸರ್ಕಾರ). ಕೃಷಿಕರ ಆದಾಯದಲ್ಲಿ ಏರಿಕೆ ಕಂಡಿರುವುದು ಆಶಾದಾಯಕವಾಗಿದ್ದರು, ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು ಸುಧಾರಣೆಯಾಗದೇ ಅವರು ಇನ್ನು ಹೆಚ್ಚು ದುಸ್ಥಿತಿಗೆ ಒಳಗಾಗುತ್ತಿರುವುದೂ ಅಷ್ಟೇ ವಾಸ್ತವವಾಗಿದೆ. ಇದಕ್ಕೆ ಪುಷ್ಠಿ ನೀಡುವಂತೆ, ನಮ್ಮ ದೇಶದಲ್ಲಿ ಪ್ರತಿನಿತ್ಯ ಹಲವಾರು ರೈತರು ಆತ್ಮಹತ್ಯೆಗೆ ಶರಣಾಗುವುದು ಸರ್ವೇ ಸಾಮಾನ್ಯವಾಗಿದೆ.

## 2. 1991ರ ಆರ್ಥಿಕ ಸುಧಾರಣೆ ಮತ್ತು ಕೃಷಿ ವಲಯ

1991ರಿಂದ ನಮ್ಮ ದೇಶದಲ್ಲಿ ಅನುಷ್ಠಾಗೊಳಿಸಿದ ಆರ್ಥಿಕ ಸುಧಾರಣೆಗಳ ಫಲವಾಗಿ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳಲ್ಲಿ ವ್ಯಾಪಕವಾದ ಬದಲಾವಣೆಗಳಾಗಿವೆ. ಬ್ಯಾಂಕು ಮತ್ತು ಹಣಕಾಸು, ಸಾರಿಗೆ ಮತ್ತು ಸಂಪರ್ಕ, ವ್ಯಾಪಾರ ಮತ್ತು ವಾಣಿಜ್ಯ ವಲಯಗಳಲ್ಲಿ ಇತರ ಎಲ್ಲಾ ವಲಗಳಿಗಿಂತ ಗಣನೀಯ ಸುಧಾರಣೆಗಳನ್ನು ನಾವು ಕಾಣುತ್ತೇವೆ ಅದರಲ್ಲೂ ಸಾರಿಗೆ ಮತ್ತು ಸಂಪರ್ಕ ಕ್ಷೇತ್ರದಲ್ಲಿ ಅಗಾದವಾದ ಬದಲಾವಣೆಗಳಾಗಿವೆ. ಇಂದು ಅತ್ಯಂತ ಕಡಿಮೆ ಮತ್ತು ಕೈಗೆಟಕುವ ದರದಲ್ಲಿ ವಿಮಾನ, ಜಲ ಸಾರಿಗೆ, ರಸ್ತೆ ಮತ್ತು ರೈಲು ಸಾರಿಗೆ ಸೌಲಭ್ಯಗಳು ಜನ ಸಾಮಾನ್ಯರಿಗೆ ಲಭ್ಯವಾಗುವಂತಾಗಿದೆ. ಇವುಗಳ ಜೊತೆಗೆ ಆರ್ಥಿಕ ಸುಧಾರಣೆಗಳು ನಮ್ಮ ದೇಶದ ಜನರ ಖರ್ಚ ಮಾಡಬಹುದಾದ

ಆದಾಯವನ್ನು ದ್ವಿಗುಣಗೊಳಿಸಿರುವುದಲ್ಲದೆ ಮಧ್ಯಮ ವರ್ಗದ ಜನಸಂಖ್ಯೆಯು ಅಪಾರ ಪ್ರಮಾಣದಲ್ಲಿ ಅಧಿಕವಾಗಲು ಕಾರಣೀಭೂತವಾಗಿದೆ. ಹಾಗಾಗಿ ನಮ್ಮ ದೇಶದಲ್ಲಿ ಮದ್ಯಮ ವರ್ಗದವರ ಸಂಖ್ಯೆ ಮತ್ತು ಅವರ ಆದಾಯವು ಅಧಿಕವಾಗಿರುವುದರಿಂದ ಅವರ ಅನುಭೋಗದ ಮಾದರಿಯಲ್ಲಿಯೂ ಬದಲಾವಣೆಯಾಗಿರುವುದನ್ನು ಗಮನಿಸಬಹುದಾಗಿದೆ. ಅಂದರೆ, ಹಣ್ಣು, ತರಕಾರಿ, ಮಾಂಸ, ಮೀನು, ಮೊಟ್ಟೆ, ಹಾಲು ಮತ್ತು ಹಾಲಿನ ಉತ್ಪನ್ನಗಳ ಅನುಭೋಗವು ಹಿಂದೆಂದಿಗಿಂತಲೂ ಇಂದು ಅಧಿಕವಾಗಿದೆ. ಹಾಗಾಗಿ ಈ ಉತ್ಪನ್ನಗಳ ಬೇಡಿಕೆಯ ಹೆಚ್ಚಳದೊಂದಿಗೆ ಅವುಗಳ ಬೆಲೆಗಳಲ್ಲಿಯೂ ಗಣನೀಯವಾಗಿ ಏರಿಕೆಯಾಗಿದೆ. ಆದ್ದರಿಂದ ಇಂದು ನಮ್ಮ ರೈತರು ಕಡಿಮೆ ಮೌಲ್ಯದ ಆಹಾರ ಧಾನ್ಯಗಳಿಗೆ ಬದಲಾಗಿ ಅಧಿಕ ಮೌಲ್ಯದ ತೋಟಗಾರಿಕೆ ಬೆಳೆಗಳು, ಪಶುಪಾಲನೆ, ಹೈನುಗಾರಿಕೆ, ಕೋಳಿ ಸಾಕಣಿಕೆ, ಹೂ ಕೃಷಿ ಇತ್ಯಾದಿ ಬೆಳೆಗಳ ಕಡೆಗೆ ಹೆಚ್ಚು ಗಮನ ಹರಿಸುತ್ತಿದ್ದಾರೆ. ಪ್ರಸ್ತುತ ನಮ್ಮ ದೇಶದ ಕೃಷಿಯು ವೈವಿಧ್ಯಮಯವಾಗಿ ಬೆಳವಣಿಗೆಯೊಂದುವುದರ ಜೊತೆಗೆ ಜಾಗತಿಕ ಸವಾಲುಗಳನ್ನು ದಿಟ್ಟವಾಗಿ ಹೆದುರಿಸುತ್ತದೆ. ಈ ವಲಯವು ಹೂವು, ಹಣ್ಣು, ತರಕಾರಿ, ಮೊಟ್ಟೆ, ಮಾಂಸ ಮತ್ತು ಮಾಂಸದ ಉತ್ಪನ್ನಗಳು, ಮೀನು ಮತ್ತು ಮೀನಿನ ಉತ್ಪನ್ನಗಳನ್ನು ವಿಶ್ವದ ವಿವಿಧ ರಾಷ್ಟ್ರಗಳಿಗೆ ರಫ್ತು ಮಾಡುವಂತಹ ಸಾಮರ್ಥ್ಯ ವೃದ್ಧಿಯಾಗಿದೆ. ಈ ಹಿನ್ನೆಲೆಯಲ್ಲಿ, ಕೆಳಗಿನ ಉದ್ದೇಶಗಳೊಂದಿಗೆ ಕರ್ನಾಟಕ ರಾಜ್ಯದಲ್ಲಿ ಹಣ್ಣು ಮತ್ತ ತರಕಾರಿ ಉತ್ಪನ್ನ ಹಾಗೂ ಅವುಗಳ ಮಾರುಕಟ್ಟೆಯ ಮೇಲೆ ಕೊರೋನಾ–19 ಸಂಕ್ರಾಮಿಕ ರೋಗದ ಪ್ರಭಾವವನ್ನು ಚರ್ಚಿಸಲಾಗಿದೆ.

### 3. ಉದ್ದೇಶಗಳು ಮತ್ತ ಅಧ್ಯಯನದ ವಿಧಾನ

ಈ ಕಳಗಿನ ನಿರ್ಧಿಷ್ಟ ಉದ್ದೇಶಗಳನ್ನು ಇಟ್ಟುಕೊಂಡು ಸಂಶೋಧನ ಲೇಖನವನ್ನು ಚರ್ಚಿಸಲಾಗಿದೆ;

1. ಭಾರತ ಮತು ಕರ್ನಾಟಕ ರಾಜ್ಯದಲ್ಲಿ ಹೂವು ಹಣ್ಣು ಮತ್ತು ತರಕಾರಿ ಬೆಳೆ ವಿಸ್ತೀರ್ಣದ ವಿಶ್ಲೇಷಣೆ.
2. ಹೂವು ಹಣ್ಣು ಮತ್ತು ತರಕಾರಿ ಉತ್ಪನ್ನ ಮಾರುಕಟ್ಟೆ ಮೇಲೆ ಕೊರೋನಾ–19ರ ಪರಿಣಾಮದ ಕುರಿತು ಚರ್ಚೆ.
3. ಸಲಹೆಗಳನ್ನು ಸೂಚಿಸುವುದು

ಮಾದ್ಯಮಿಕ ಆಕರಗಳನ್ನು ಸಂಗ್ರಹಿಸಿ ಈ ಲೇಖನವನ್ನು ಪ್ರಸ್ತುತಪಡಿಸಲಾಗಿದೆ. 2011ರ ಜನಸಂಖ್ಯಾ ವರಧಿ, ಕೃಷಿ ಮತ್ತು ಸಹಕಾರ ಇಲಾಖೆ ಕರ್ನಾಟಕ ಸರ್ಕಾರ ಬೆಂಗಳೂರು ಮತ್ತು ಭಾರತ ಸರ್ಕಾರ ನವ ದೆಹಲಿ, ವಾರ್ಷಿಕ ವರಧಿ, ಜಿಲ್ಲಾ ಅಂಕಿ–ಆಂಶಗಳ ಮನ್ನೋಟ, ಕರ್ನಾಟಕ ಸರ್ಕಾರ, ಬೆಂಗಳೂರು ಇತ್ಯಾದಿಗಳನ್ನು ಸಂಗ್ರಹಿಸಿ ಈ ಸಂಶೋಧನ ಲೇಖನವನ್ನು ರೂಪಿಸಲಾಗಿದೆ. ಆದ್ದರಿಂದ ಈ ಲೇಖನವು ದ್ವಿತೀಯ ಆಕರಗಳ ಮೇಲೆ ನಿರುಪಿಸಲ್ಪಟ್ಟಿದೆ.

### 4. ಲೇಖನದ ಚರ್ಚೆ

ಇತ್ತೀಚಿನ ದಿನಗಳಲ್ಲಿ ಹಣ್ಣು ಮತ್ತು ತರಕಾರಿ ಉತ್ಪನ್ನಗಳಿಗೆ ನಿರಂತರವಾಗಿ ಬೇಡಿಕೆ ಅಧಿಕವಾಗುತ್ತಿರುವುದರಿಂದ, ಈ ಬೆಳೆಗಳನ್ನು ಬೆಳೆಯಲು ರೈತರು ಹೆಚ್ಚು ಆಸಕ್ತರಾಗಿರುತ್ತಾರೆ. ಆದ್ದರಿಂದ ಮೇಲಿನ ಉದ್ದೇಶಗಳನ್ನು ಕೆಳಗಿನಂತೆ ವಿಶ್ಲೇಷಣೆಮಾಡಲಾಗಿದೆ;

## 4.1. ಭಾರತದಲ್ಲಿ ಹೂವು ಹಣ್ಣು ಮತ್ತು ತರಕಾರಿ ಬೆಳೆ ಪ್ರದೇಶ ಮತ್ತು ಉತ್ಪಾದನೆ

ಭಾರತದಲ್ಲಿ ವಿವಿಧ ಬಗೆಯ ಹಣ್ಣುಗಳು, ತರಕಾರಿ ಮತ್ತು ಹೂಗಳನ್ನು ಬೆಳೆಯಲಾಗುತ್ತದೆ. ವಿವಿಧ ಅವಧಿಯಲ್ಲಿ, ಪ್ರದೇಶವಾರು ಬೆಳೆಯುವ ಬೆಳೆಗಳ ವಿಸ್ತೀರ್ಣ, ಅವುಗಳ ಒಟ್ಟು ಉತ್ಪನ್ನಕ್ಕೆ ಸಂಬಂಧಿಸಿದ ದತ್ತಾಂಶಗಳನ್ನು ಸಂಗ್ರಹಿಸಿ ಈ ಕೆಳಗಿನ ಕೋಷ್ಟಕ–1ರಲ್ಲಿ ಪ್ರಸ್ತುತ ಪಡಿಸಲಾಗಿದೆ. ಒಂದು ಆಸಕ್ತದಾಯಕ ಅಂಶವನ್ನು ಈ ಕೆಳಗಿನ ಕೋಷ್ಟಕದಲ್ಲಿ ಗಮನಿಸಬಹುದು, ಅದು 2016 ರಿಂದ 2018ರವರೆಗೆ ತರಕಾರಿ ಬೆಳೆಯು ಪ್ರದೇಶವು ಅಧಿಕವಾಗಿದೆ ಅದರೆ 2018–2019ರಲ್ಲಿ ಹೆಕ್ಟೇರುವಾರು ಪ್ರದೇಶ ಇಳಿಮುಖವಾಗದೆ. ಆದಾಗ್ಯೂ ಎಲ್ಲಾ ತರಕಾರಿಗಳ ಒಟ್ಟು ಉತ್ಪನ್ನವು 2016–2017 ರಿಂದ 2018–2019ರವರೆಗೆ ನಿರಂತರವಾಗಿ ಹೆಚ್ಚಾಗಿದೆ. ನಾನಾ ಬಗೆಯ ತರಕಾರಿ ಬೆಳೆಗಳ ಅಡಿಯಲ್ಲಿರುವ ಹೆಕ್ಟೇರ್‌ವಾರು ಪ್ರದೇಶದಲ್ಲಿ ಇಳಿಮುಖವಾಗಿರುವುದು ಗೋಚರವಾಗುತ್ತಿದ್ದರು ಉತ್ಪಾದನೆ ಗಣನೀಯವಾಗಿ ಹೆಚ್ಚಾಗಿರುವುದನ್ನು ಅಂಕಿ–ಅಂಶಗಳು ಬಿಂಬಿಸುತ್ತವೆ. ಹಣ್ಣು ಬೆಳೆಯುವ ಪ್ರದೇಶದ ಪ್ರಮಾಣವನ್ನು ಕೋಷ್ಟಕದಲ್ಲಿರುವ ಎಲ್ಲಾ ಅವಧಿಯಲ್ಲಿ ನಿರಂತರವಾಗಿ ಹೆಚ್ಚಾಗಿದೆ ಮತ್ತು ವಿವಿಧ ಬಗೆಯ ಹಣ್ಣುಗಳ ಉತ್ಪಾದನೆಯು ಸಹ ಈ ಎಲ್ಲಾ ಅವಧಿಯಲ್ಲಿ ಏರು ಮುಖವಾಗಿದೆ. ಇನ್ನೊಂದು ಆಸಕ್ತದಾಯಕವಾದ ಅಂಶವನ್ನು ಕೆಳಗಿನ ಕೋಷ್ಟಕದಿಂದ ಗಮನಿಸಬಹುದು ಅದು ಹೂಗಳ ಉತ್ಪಾದನೆಯು ಮೂರು ಅವಧಿಯಲ್ಲಿ ಏರಿಕೆಯನ್ನು ಕಂಡಿದೆ ಅದರೆ ಬೆಳೆಯ ವಿಸ್ತೀರ್ಣ ಮಾತ್ರ ಮೊದಲ ಎರಡು ಅವಧಿಯಲ್ಲಿ ಹೆಚ್ಚಾಗಿದ್ದರೂ ಕೊನೆಯ ಅವಧಿಯಲ್ಲಿ (2018–2019) ಅದು ಇಳಿಮುಖವಾಗಿದೆ. ಆಂದರೆ ತರಕಾರಿ ಮತ್ತು ಹೂ ಬೆಳೆಯುವ ಪ್ರದೇಶವು ಮೊದಲ ಎರಡು ಅವಧಿಯಲ್ಲಿ ಹೆಚ್ಚಾಗಿದ್ದು 2018–2019 ರಲ್ಲಿ ಕಡಿಮೆಯಾಗಿದ್ದರು, ಅವುಗಳೇರಡರ ಉತ್ಪಾದನೆ ಮಾತ್ರ ಎಲ್ಲಾ ಅವಧಿಯಲ್ಲಿ ಹೆಚ್ಚಾಗಿದೆ. ಪ್ರಾಯಶ್ಯ, ಉತ್ತಮ ತಳಿಯ ತರಕಾರಿ ಬೀಜಗಳು, ರಸಾಯನಿಕ ಗೊಬ್ಬರ ಮತ್ತು ವೈಜ್ಞಾನಿ ವಿಧಾನಗಳನ್ನು ಅಳವಡಿಸಿಕೊಂಡಿರುವುದರಿಂದ ತರಕಾರಿ ಮತ್ತು ಹೂಗಳ ಉತ್ಪಾದನೆ ಹೆಚ್ಚಾಗಿರುವುದಾಗಿ ಅಭಿಪ್ರಾಯಿಸ ಬಹುದಾಗಿದೆ.

**ಕೋಷ್ಟಕ.1: ಭಾರತದಲ್ಲಿ ಹೂವು ಹಣ್ಣು ಮತ್ತು ತರಕಾರಿ ಬೆಳೆ ಪ್ರದೇಶ ಮತ್ತು ಉತ್ಪಾದನೆ**

(ವಿಸ್ತೀರ್ಣ '000ಹೆಕ್ಟೇರ್‌ಗಳಲ್ಲಿ )
(ಉತ್ಪಾದನೆ '000 ಒ.ಮೆ)

| ಕ್ರ. ಸಂ. | ವಿವರಗಳಯ | 2016–2017 | | 2017–2018 | | 2018–2019 | | 2019–2020 | |
|---|---|---|---|---|---|---|---|---|---|
| | | ಪ್ರದೇಶ | ಉತ್ಪಾದನೆ | ಪ್ರದೇಶ | ಉತ್ಪಾದನೆ | ಪ್ರದೇಶ | ಉತ್ಪಾದನೆ | ಪ್ರದೇಶ | ಉತ್ಪಾದನೆ |
| 1 | ತರಕಾರಿಗಳು | 10238 | 178172 | 10259 | 184394 | 10100 | 185883 | 10292 | 1880092 |
| 2 | ಹಣ್ಣುಗಳು | 6373 | 92918 | 6506 | 97358 | 6648 | 98579 | 6761 | 102028 |
| 3 | ಹೂವುಗಳು | 306 | 2392 | 324 | 2785 | 313 | 2865 | 305* | 3063* |

*Source*: Department of Agriculture, Cooperation & Farmers Welfare

*Second Advance Estimates

## 4.2. ಕರ್ನಾಟಕದಲ್ಲಿ ಹೂವು ಹಣ್ಣು ಮತ್ತು ತರಕಾರಿ ಬೆಳೆ ಪ್ರದೇಶ ಮತ್ತು ಉತ್ಪಾದನೆ

ಕರ್ನಾಟಕ ರಾಜ್ಯವು ಭಾರತ ದೇಶದಲ್ಲಿ ಭೌಗೋಳಿಕವಾಗಿ ಆರನೇಯ ಅತಿ ದೊಡ್ಡ ರಾಜ್ಯವಾಗಿದ್ದು ವೈವಿಧ್ಯಮಯವಾದ ಬೆಳೆಗಳನ್ನು ಬೆಳೆಯುವಲ್ಲಿ ಪ್ರಮುಖ ರಾಜ್ಯವಾಗಿದೆ. ಈ ರಾಜ್ಯದಲ್ಲಿ ಟಮೊಟೋ, ಅಲೋಗೆಡ್ಡೆ, ಬದನೆ, ಬೆಂಡೆ ಇತ್ಯಾದಿ ತರಕಾರಿಗಳನ್ನೂ ಮಾವು, ಬಾಳೆ, ದಾಳಿಂಬೆ, ಅನಾನಸ್, ದ್ರಾಕ್ಷಿ, ಕಲ್ಲಂಗಡಿ, ಕರಬೂಜ ಇನ್ನು ಮುಂತಾದ ಹಣ್ಣುಗಳನ್ನು ಹಾಗೂ ಮಲ್ಲಿಗೆ, ಕನಕಾಮರ, ಸೇವಂತಿಗೆ, ಚಂಡುವು ಇನ್ನೂ ಬಗೆ ಬಗೆಯ ಹೂವುಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಬೆಳೆದು ಮಾರಟಮಾಡಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಬೆಳೆಯುವ

ವಿವಿಧ ಹಣ್ಣು ಮತ್ತು ತರಕಾರಿಗಳು ಹಾಗೂ ಹೂವುಗಳು ವಿಶ್ವದ ನಾನಾ ಭಾಗಗಳಿಗೆ ರಫ್ತುಮಾಡಲಾಗುತ್ತಿದೆ. ಈ ಎಲ್ಲಾ ಬೆಳೆಗಳನ್ನು ಬೆಳೆಯುವ ಪ್ರದೇಶ, ವಿವಿಧ ಅವಧಿಯಲ್ಲಿ ಅವುಗಳ ಉತ್ಪಾದನೆಗೆ ಸಂಬಂಧಿಸಿದಂತಹ ದತ್ತಾಂಶಗಳನ್ನು ಸಂಗ್ರಹಿಸಿ ಕೋಷ್ಟಕ-2ರಲ್ಲಿ ಪ್ರಸ್ತುತ ಪಡಿಸಲಾಗಿದೆ.

ಈ ಕೆಳಗಿನ ಕೋಷ್ಟಕವನ್ನು ಅವಲೋಕಿಸಿದಾಗ ಕಂಡುಬರುವುದೇನೆಂದರೆ, 2012–2013 ರಿಂದ 2016–2017ರ ವರೆಗೆ ಹಣ್ಣುಗಳ ಬೆಳೆಯುವ ಪ್ರದೇಶವು ಏರಿಕೆ ಕಂಡಿದೆ, ಆದರೆ 2018–2019ರ ಅವಧಿಯಲ್ಲಿ ಅದು ಇಳಿಮುಖವಾಗಿರುವುದನ್ನು ಕಾಣಬಹುದು. ಮೇಲಾಗಿ ಮೊದಲ ಎರಡು ಅವಧಿಗಳಲ್ಲಿ ಉತ್ಪಾದನೆಯು ಅಧಿಕವಾದರೂ ಸಹ ಅದು 2018–2019 ರ ಅವಧಿಯಲ್ಲಿ ಇಳಿಕೆಯನ್ನು ಕಂಡಿದೆ. ಅಂದರೆ ಕರ್ನಾಟಕ ರಾಜ್ಯದಲ್ಲಿ ಅಕಾಲಿಕ ಮಳೆ ಮತ್ತು ಬೆಲೆಗಳಲ್ಲಿನ ಅನಿಶ್ಚಿತತೆಯು ಹಣ್ಣುಗಳ ಉತ್ಪಾದನೆ ಮತ್ತು ಅವುಗಳ ಬೆಳೆಯುವ ಪ್ರದೇಶದಲ್ಲಿ ಹೆಚ್ಚು ಏರಿಳಿತಗಳಾಗಿರುವುದನ್ನು ಗುರುತಿಸಬಹುದಾಗಿದೆ. ಇದೇ ರೀತಿಯ ಪರಿಣಾಮಗಳನ್ನು ತರಕಾರಿ ಮತ್ತು ಅವುಗಳ ಉತ್ಪನ್ನ ಹಾಗೂ ಹೂವು ಬೆಳೆ ಬೆಳೆಯುವ ಪ್ರದೇಶವಾರು ವ್ಯತ್ಯಾಸವಾಗಿರುವುದು ಗಮನಿಸಬಹುದು. ಹೀಗೆ ಹಣ್ಣು, ತರಕಾರಿಗಳು ಮತ್ತು ಹೂವು ಈ ಎಲ್ಲಾ ಬೆಳೆಗಳ ಉತ್ಪಾದನೆಯು ಮಳೆ, ಮಾರುಕಟ್ಟೆ, ಬೆಲೆ ಸ್ಥಿರತೆ ಹಾಗೂ ಅವುಗಳನ್ನು ಸಂರಕ್ಷಿಸಲು ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಅವಲಂಭಿಸಿರುತ್ತವೆ. ಹಾಗಾಗಿ, ಕೃಷಿ ಉತ್ಪನ್ನಗಳನ್ನು ಕೆಡದಂತೆ ಸಂಗ್ರಹಿಸಿಡಲು ಶೀತಕ ಉಗ್ರಾಣಗಳಂತಹ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರೆ ಹೂವು, ಹಣ್ಣು ಮತ್ತು ತರಕಾರಿ ಬೆಳೆ ಮತ್ತು ಅವುಗಳ ಉತ್ಪಾದನೆಯನ್ನು ಹೆಚ್ಚಿಸಲು ಅನುಕೂಲವಾಗತ್ತದೆ.

**ಕೋಷ್ಟಕ.2: ಕರ್ನಾಟಕದಲ್ಲಿ ಹೂವು ಹಣ್ಣು ಮತ್ತು ತರಕಾರಿ ಬೆಳೆ ಪ್ರದೇಶ ಮತ್ತು ಉತ್ಪಾದನೆ**

(ವಿಸ್ತೀರ್ಣ '000ಹೆಕ್ಟೇರ್‌ಗಳಲ್ಲಿ )
(ಉತ್ಪಾದನೆ '000 ಟನ್)

| ಕ್ರ. ಸಂ. | ಅವಧಿ | ಹಣ್ಣುಗಳು | | ತರಕಾರಿಗಳು | | ಹೂವುಗಳು |
|---|---|---|---|---|---|---|
| | | ಪ್ರದೇಶ | ಉತ್ಪಾದನೆ | ಪ್ರದೇಶ | ಉತ್ಪಾದನೆ | ಪ್ರದೇಶ |
| 1 | 2012–2013 | 396.00 | 6651.60 | 418.80 | 7500.70 | 30.60 |
| 2 | 2016–2017 | 409.49 | 6910.74 | 469.17 | 8617.26 | 52.37 |
| 3 | 2018–2019 | 395.55 | 6567.29 | 430.93 | 7044.89 | 24.76 |
| 4 | 2019–2020 | 373.82 | 6558.42 | 365.49 | 6950.52 | 24.66 |

*Source*: Department of Agriculture, Cooperation & Farmers Welfare

### 4.3. ಹಣ್ಣು ತರಕಾರಿ ಮತ್ತು ಹೂವು ಉತ್ಪನ್ನಗಳ ಮೇಲೆ ಕೊರೋನ–19 ಸಂಕ್ರಾಮಿಕ ರೋಗದ ಪರಿಣಾಮಗಳು

ಸೆಪ್ಟಂಬರ್ 2019 ರಂದು ಮೊದಲಬಾರಿಗೆ ಚೀನಾದ ಹೂವನ್ ನಗರದಲ್ಲಿ ಕೋರೊನಾ ಸುಕ್ರಾಮಿಕ ರೋಗವು ಕಾಣಿಸಿಕೊಂಡಿತು. ತದನಂತರ ಅದು ಯುರೋಪಿನ ವಿವಿಧ ರಾಷ್ಟ್ರಗಳಿಗೆ ವ್ಯಾಪಕವಾಗಿ ಹರಡಿತು. ನೋಡನೋಡುತ್ತಿದ್ದಂತೆ ಅದು ವಿಶ್ವದ ಎಲ್ಲಾ ಭಾಗಗಳಿಗೆ ವ್ಯಾಪಿಸಿ ಬಿಟ್ಟಿತು, ಫೆಬ್ರವರಿ 2020ರಲ್ಲಿ ಭಾರತದ ಕೇರಳ ರಾಜ್ಯದಲ್ಲಿ ಈ ಸಾಂಕ್ರಮಿಕ ರೋಗವು ಚೀನಾದಿಂದ ಬಂದ ವಿದ್ಯಾರ್ಥಿಗಳಲ್ಲಿ ಮೊದಲಿಗೆ ಕಾಣಿಸಿಕೊಂಡಿತು. ಹೀಗೆ ಆರಂಬವಾದ ಕೋವಿಡ್–19 ಸುಕ್ರಾಮಿಕ ರೋಗವು 2020ರಲ್ಲಿ ಹೆಚ್ಚು ಪ್ರಭಾವವನ್ನು ಜನರ ಜೀವದ ಮೇಲೆ ಅಂತಹ ಪರಿಣಾಮವನ್ನು ಬೀರಲಿಲ್ಲ. ಆದರೆ ದೇಶದ ಅರ್ಥವ್ಯವಸ್ಥೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದ್ದರಿಂದಾಗಿ ಕೋಟ್ಯಾಂತರ ಜನರು ಉದ್ಯೋಗನ್ನು ಕಳೆದುಕೊಂಡರೆ ಇನ್ನು ಕೆಲವರು ಪಟ್ಟಣ ಮತ್ತು ನಗರಗಳನ್ನು ತೊರೆದು ತಮ್ಮ ಸ್ವಂತ ಊರುಗಳಿಗೆ ಕಾಲ್ನಡೆಗೆಯಲ್ಲಿ ತೆರಳಬೇಕಾಯಿತು. ಇದರಿಂದ ನೂರಾರು ಜನರು ಮಾರ್ಗ ಮಧ್ಯದಲ್ಲಿಯೇ ಜೀವ ಬಿಡುವಂತ್ತಾಯಿತು. ಇನ್ನೊಂದು ಕಡೆ ಮಾರ್ಚ ತಿಂಗಳಲ್ಲಿ

ಲಾಕ್‌ಡೌನ್ ಮಾಡಿದ್ದರಿಂದ ಹಣ್ಣು, ತರಕಾರಿ ಮತ್ತು ಹೂವು ಬೆಳೆಗಾರರ ಮೇಲೆ ಮಾರಕವಾದ ಪರಿಣಾಮವನ್ನುಂಟುಮಾಡಿತು. ಪುನಃ 2021 ಮಾರ್ಚ ತಿಂಗಳಲ್ಲಿ ಕೋವಿಡ್–19ರ ಎರಡನೆ ಅಲೆಯು ಮೊದಲ ಅಲೆಗಿಂತ ಅತ್ಯಂತ ತೀವ್ರವಾಗಿ ಹರಡುವುದರ ಮೂಲಕ ದೇಶದ ಆರೋಗ್ಯ ಸೇವೆಗಳನ್ನು ಒಂದು ಕಡೆ ಪರೀಕ್ಷೆಗೆ ಒಡ್ಡಿದರೆ ಮೊತ್ತೊಂದು ಕಡೆ ದೊಡ್ಡ ಪ್ರಮಾದಲ್ಲಿ ಜನರು ಕೋವಿಡ್–19 ಸಂಕ್ರಾಮಿಕ ರೋಗಕ್ಕೆ ತುತ್ತಾಗಿ ಸುಮಾರ ಮೂರ ಲಕ್ಷದವರೆಗೆ ಮರಣಹೊಂದಿರುತ್ತಾರೆ. ಈ ಎರಡನೆ ಅಲೆಯಲ್ಲಿ ದೇಶವನ್ನು ಸಂಪೂರ್ಣವಾಗಿ ಲಾಖ್‌ಡೌನ್‌ಮಾಡದೆ ಇದ್ದರೂ ಸಹ ಹಲವು ರಾಜ್ಯಗಳು ಸ್ವ ಇಚ್ಛೆಯಿಂದ ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸುಮಾರು ಮೂರು ತಿಂಗಳುಗಳ ಕಾಲ (ಏಪ್ರೀಲ್‌ನಿಂದ ಜೂನ್, 2021) ಲಾಖ್‌ಡೌನ್‌ನ್ನು ಮಾಡಿರುತ್ತವೆ. ಇದೇ ಅವಧಿಯಲ್ಲಿ ಕೆಲವೊಂದು ಹೂವು, ಹಣ್ಣುಗಳ ಸಗ್ಗಿಯಾಗಿದ್ದು ಅವುಗಳ ಮಾರುಕಟ್ಟೆಯ ಮೇಲೆ ಪ್ರತಿಕೂಲ ಪರಿಣಾಮವುಂಟಾಗಿರುತ್ತದೆ. ಅಂತಹವುಗಳಲ್ಲಿ ಪ್ರಮುಖವಾವುಗಳೆಂದರೆ,

**4.3.1. ಕಠಿಣ ನಿರ್ಭಂದಗಳು:** ಕೊರೊನಾ ರೋಗದ ಸರಪಳಿಯನ್ನು ತುಂಡರಿಸಲು ಭಾರತ ಸರ್ಕಾರವು ವಿಪತ್ತು ನಿರ್ವಹಣ ಕಾಯಿದೆಯನ್ನು ಕಟ್ಟುನಿಟ್ಟಾಗಿ ಮಾರ್ಚ 2020 ರಿಂದ ಜುಲೈ 2020ರವರೆಗೆ ಜಾರಿಗೊಳಿಸಿದ್ದಲ್ಲದೆ, 144ನೇ ಸೆಕ್ಷನ್ ಮತ್ತು ಕರ್ಫ್ಯೂವನ್ನು ಸಹ ಹೇರಲಾಯಿತು. ಪೂರ್ವಾಹ್ನ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಲು ಮಾತ್ರ ಅನುಮತಿಯನ್ನು ನೀಡಲಾಯಿತು. ಇಂತಹ ಕಠಿಣ ನಿರ್ಭಂದಗಳಿಂದಾಗಿ ಪೂರೈಕೆ ಸರಪಳಿಯು ಸಂಪೂರ್ಣವಾಗಿ ಅಸ್ತವ್ಯಸ್ತವಾಯಿತು. ಅದರಲ್ಲೂ ಮಾರ್ಚ ಮತ್ತು ಏಪ್ರೀಲ್ ತಿಂಗಳಲ್ಲಿ ಕಲ್ಲಂಗಡಿ, ಕರಬೂಜ, ಮಾವು ಇತ್ಯಾದಿ ಹಣ್ಣುಗಳ ಸುಗ್ಗಿಯಾಗಿದ್ದು, ಇವುಗಳನ್ನು ಮಾರುಕಟ್ಟೆಗೆ ಸಾಗಿಸಲು ಸಾಧ್ಯವಾಗಲ್ಲಿಲ್ಲ ಹಾಗೂ ಅವುಗಳನ್ನು ಮಾರಾಟ ಮಾಡುವುದು ಸಹ ಅಸಾಧ್ಯವಾಯಿತು. ಇವುಗಳನ್ನು ಬೆಳೆದ ರೈತರು ಮತ್ತು ಹಣ್ಣು ಮತ್ತು ತರಕಾರಿಗಳನ್ನು ಮಾರಟಮಾಡುವವರು ತೀವ್ರ ಸಂಕಷ್ಟಕ್ಕೆ ತುತ್ತಾಗಬೇಕಾಯಿತು.

**4.3.2. ಬೆಲೆ ಕುಸಿತ:** ಹಣ್ಣು ಮತ್ತು ತರಕಾರಿ ಉತ್ಪನ್ನಗಳ ಬೆಲೆಗಳು ಅವುಗಳ ಪೂರೈಕೆಗಿಂತ ಬೇಡಿಕೆಯು ಬೆಲೆ ನಿರ್ಧಾರದಲ್ಲಿ ಹೆಚ್ಚು ಪ್ರಬಾವಶಾಲಿಯಾಗಿರತ್ತದೆ. ಆದರೆ ಸರ್ಕಾರವು ಮಾರ್ಚ 2020 ರಿಂದ ಕಠಿಣ ನಿರ್ಭಂದಗಳನ್ನು ಅನುಷ್ಠಾನಗೊಳಿಸಿದ್ದರಿಂದ ಜನರು ಮನೆಯಿಂದ ಹೊರಬರಲಾಗದಂತಹ ಸ್ಥಿತಿ ನಿರ್ಮಾಣವಾಯಿತು. ಈ ನಿರ್ಭಂದವು ನಗರ ಮತ್ತು ಪಟ್ಟಣಗಳಲ್ಲಿ ಅತ್ಯಂತ ತೀವ್ರವಾಗಿತ್ತು. ಜನರು ಸರಕುಗಳನ್ನು ಕೊಳ್ಳಲು ಹೆಣಗಾಡಬೇಕಾಯಿತು. ಅಗತ್ಯ ವಸ್ತುಗಳ ಖರೀದಿಗೆ ನಿಗಧಿಮಾಡಿದ ಕಾಲಾವಧಿಯು ಬಹಳ ಕಡಿಮೆಯಾಗಿತ್ತು. ಆದ್ದರಿಂದ ತರಕಾರಿ, ಹಣ್ಣು ಮತ್ತು ಹೂವುಗಳ ಬೆಲೆಗಳು ಸಂಪೂರ್ಣವಾಗಿ ಕೆಳಮುಖವಾಗಿ ಚಲಿಸಲಾರಂಭಿಸಿದವು.

**4.3. 3. ಬೇಡಿಕೆ ಪ್ರಮಾಣದಲ್ಲಿ ಇಳಿಮುಖ:** ಕೋವಿಡ್–19 ಸಾಂಕ್ರಾಮಿಕವು ವ್ಯಾಪಕವಾಗಿ ಹರಡುವುದರ ಜೊತೆ ಅಸಂಖ್ಯಾತ ಜನರು ಉದ್ಯೋಗ ಕಳೆದುಕೊಳ್ಳಲು ಕಾರಣವಾಯಿತು. ಶೇಕಡ 50ಕ್ಕಿಂತ ಹೆಚ್ಚು ಜನರು ತಮ್ಮ ದಿನನಿತ್ಯದ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಲು ಹೆಣಗಾಡುವಂತಾಯತು. ಜನರ ಬಳಿ ಹಣವಿಲ್ಲದಂತಾಗಿ ಕೇವಲ ಅಗತ್ಯ ವಸ್ತುಗಳನ್ನು ಮಾತ್ರ ಕೊಂಡುಕೊಳ್ಳಲು ತಮ್ಮಲ್ಲಿದ್ದ ಅಲ್ಪ ಸ್ವಲ್ಪ ಹಣವನ್ನು ವ್ಯಯಮಾಡುವಂತಾಯಿತು. ಹೀಗೆ ವಲಸೆ, ನಿರುದ್ಯೋಗ, ಆದಾಯದ ಕುಸಿತ, ಆರೋಗ್ಯದ ಮೇಲಿನ ವೆಚ್ಚದಲ್ಲಿನ ಏರಿಕೆ ಇತ್ಯಾದಿ ಕಾರಣಗಳಿಂದ ಹಣ್ಣು ಮತ್ತು ತರಕಾರಿಗಳಿಗೆ ಬೇಡಿಕೆಯು ಇದ್ದಕ್ಕಿದಂತೆ ಕಡಿಮೆಯಾಯಿತು.

**4.3.4. ದಸ್ತಾನು ಮತ್ತು ಶೈತ್ಯಾಗರಗಳ ಕೊರತೆ:** ಹಣ್ಣು, ತರಕಾರಿ ಮತ್ತು ಹೂವು ಇವುಗಳು ಬಹುಬೇಗನೆ ಹಾಳಾಗುವಂತಹ ಪದಾರ್ಥಗಳಾಗಿದ್ದು, ನಿರ್ಬಂಧದ ಸಮಯದಲ್ಲಿ ಸರ್ಕಾರವು ಅತ್ಯಂತ ಕಡಿಮೆ ಅವಧಿಯನ್ನು ಮಾರಾಟ ಮಾಡಲು ಮತ್ತು ಕೊಂಡುಕೊಳ್ಳಲು ಸಮಯವನ್ನು ನಿಗಧಿಮಾಡಿದ್ದರಿಂದ ಮಾರಟವಾಗದೇ ಉಳಿದ ಉತ್ಪನ್ನಗಳನ್ನು ಕೆಡದಂತೆ ದಾಸ್ತಾನುಮಾಡಲು ಅಗತ್ಯ ಮೂಲಭೂತ ಸೌಕರ್ಯಗಳ ಕೊರತೆಯುಂಟಾಯಿತು. ದಾಸ್ತಾನು ಮತ್ತು ಶೈತ್ಯಗಾರಗಳು ಅಲಭ್ಯತೆಯಿಂದಾಗಿ ರೈತರು ಮತ್ತು ಮಾರಟಗಾರರು ನಷ್ಟಹೊಂದುವಂತಾಯಿತು.

**4.3.5. ಇತರೆ ಪರಿಣಾಮಗಳು:** ಕೊರಾನಾ ಸಂಕ್ರಾಮಿಕ ರೋಗವು ಯಾರೂ ನಿರೀಕ್ಷೆಗೆ ನಿಲುಕದ ರೀತಿಯಲ್ಲಿ ಜಗತ್ತಿನಾದ್ಯಂತ ವ್ಯಾಪಕವಾಗಿ ಹರಡಿ ಜನ ಜೀವನವನ್ನು ಅಸ್ತವ್ಯಸ್ತಗೊಳಿಸಿತು. ಈ ಮೇಲಿನ ಪ್ರಮುಕ ಪರಿಣಾಮಗಳಲ್ಲದೆ ಹಣ್ಣು ಹಂಪಲುಗಳ ಮೇಲಿನ ವ್ಯಚ್ಚದ ಇಳಿಕೆ, ಸಾಗಾಣಿಕೆ, ಮಾಹಿತಿ, ಗ್ರಾಹಕರ ಸಂಖ್ಯೆಯಲ್ಲಿ ಕುಸಿತ ಇತ್ಯಾದಿ ಪರಿಣಾಮಗಳನ್ನು ಕೃಷಿಯ ಮೇಲೆ ಬೀರಿರುತ್ತದೆ.

### 4.4. ಸಲಹೆಗಳು

ಕೊರೋನಾ–19 ಸಂಕ್ರಾಮಿಕ ರೋಗವು ಹೂವು ಹಣ್ಣು ಮತ್ತು ತರಕಾರಿ ಉತ್ಪನ್ನ ಹಾಗೂ ಅವುಗಳ ಮಾರುಕಟ್ಟೆಯ ಮೇಲೆ ಹಲವು ಕೆಡುಕುಗಳನ್ನುಂಟುಮಾಡಿರುವುದನ್ನು ಸವಿಸ್ತಾವಾಗಿ ಸಂಶೋಧನ ಲೇಖನದಲ್ಲಿ ಚರ್ಚಿಸಲಾಗಿದೆ. ಈ ಸಮಸ್ಯೆಗಳಿಗೆ ಕೆಲವೊಂದು ಪರಿಹಾರ ಕ್ರಮಗಳನ್ನು ಸೂಚಿಸಬಹುದಾಗಿದೆ. ಅವುಗಳೆಂದರೆ;

ಕೃಷಿ ಕ್ಷೇತ್ರವು ಅನಿಶ್ಚಿತತೆಯಿಂದ ಕೂಡಿದ್ದು ಉತ್ಪನ್ನ ಮತ್ತು ಇಳುವರಿಯ ಮೇಲೆ ಹವಾಮಾನವು ಪ್ರಮುಖ ಪ್ರಭಾವವನ್ನು ಬೀರುತ್ತದೆ. ಅದರಲ್ಲೂ ಹೂವು, ಹಣ್ಣು ಮತ್ತು ತರಕಾರಿಯಂತಹ ಉತ್ಪನ್ನಗಳ ಮೇಲೆ ಅದರ ಪರಿಣಾಮವು ಊಹೆಗೂ ನಿಲುಕುವುದಿಲ್ಲ. ಈತ್ತೀಚೆಗೆ ವ್ಯಾಪಕವಾಗಿ ಹರಡುತ್ತಿರುವ ಕೊರೋನಾ–19 ಸಹ ಒಂದು. ಇದರಿಂದ ರೈತ ವರ್ಗವು ಅತ್ಯಂತ ಹೆಚ್ಚ ಸಂಕಷ್ಟಕ್ಕೆ ಗುರಿಯಾಗಿದೆ. ಆದ್ದರಿಂದ ಬೆಳೆ ವಿಮೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಿ ಎಲ್ಲಾ ರೈತರಿಗೆ ಅದರ ಪ್ರಯೋಜನಗಳನ್ನು ಮನವರಿಕೆ ಮಾಡಿಕೊಟ್ಟು ಪಾಲ್ಗೋಳ್ಳಲು ಪ್ರೋತ್ಸಹಿಸುವುದು ಒಂದು ಮಹತ್ವದ ಪರಿಹಾರ ಕ್ರಮವಾಗಿರುತ್ತದೆ. ಬೆಳೆ ವಿಮೆಯಲ್ಲಿರುವ ಕಠಿಣ ನಿಬಂಧನೆಗಳನ್ನು ಸರಳಗೊಳಿಸಿ ಸಾಮಾನ್ಯ ರೈತರು ಸಹ ಅದರ ಪ್ರಯೋಜನ ಪಡೆದುಕೊಳ್ಳಲು ಅನುವುಮಾಡಿಕೊಡಬೇಕು.

ಸಹಜವಾಗಿ ಬಹು ಬೇಗನೆ ನಸಿಸಿಹೋಗುವಂತಹ ಹೂವು, ಹಣ್ಣು ಮತ್ತು ತರಕಾರಿಗಳು ರೈತರಿ ಅಧಿಕ ಆದಾಯವನ್ನು ತಂದುಕೊಡುವಲ್ಲಿ ಹೆಚ್ಚು ಮಹತ್ವ ಪಡೆದಿವೆ. ಅದರೆ ಇವುಗಳನ್ನು ನಿರ್ವಹಿಸಲು ಬೇಕಾದಂತಹ ಮೂಲಭೂತ ಸೌಲಭ್ಯಗಳ ಕೊರತೆ ಕಂಡುಬರುತ್ತಿದೆ. ಬೆಲೆ ದಿಢೀರ್ ಕಸಿತ, ಹೂವು, ಹಣ್ಣು ಮತ್ತು ತರಕಾರಿ ಇತ್ಯಾದಿಗಳ ಉತ್ಪಾದನೆ ಹೆಚ್ಚಾದಂತಹ ಸುಂದರ್ಭದಲ್ಲಿ ಅವುಗಳನ್ನು ಕೆಡದಂತೆ ಸಂಗ್ರಹಿಸುವಂತಹ ವ್ಯವಸ್ಥೆ ನಮ್ಮಲ್ಲಿರುವುದಿಲ್ಲ. ಆದ್ದರಿಂದ ಸರ್ಕಾರ ಮತ್ತು ಖಾಸಗಿ ಪಾಲುದಾರಿಕೆಯೊಂದಿಗೆ ದೊಡ್ಡ ಪ್ರಮಾಣದಲ್ಲಿ ಬಂಡವಾಳವನ್ನು ಉಗ್ರಾಣಗಳು, ದಾಸ್ತಾನು ಕೋಠಿಗಳು ಮತ್ತು ಶೈತ್ಯಾಗಾರಗಳನ್ನು ನಿರ್ಮಾಣಮಾಡಲು ತೊಡಗಿಸಬೇಕು. ಇದು ಕೃಷಿಯಲ್ಲಿರುವ ಅಸ್ಥಿರತೆಯನ್ನು ತೊಡದುಹಾಕುತ್ತದೆ ಹಾಗೂ ಬೇಡಿಕೆ ಮತ್ತು ಪೂರೈಕೆಯಲ್ಲಾಗುವ ಏರಿಳಿತಗಳನ್ನು ಸರಿಪಡಿಸಲು ಸಹಕಾರಿಯಾಗುತ್ತದೆ.

## 5. ಉಪಸಂಹಾರ

ಭಾರತದಲ್ಲಿ ಕೃಷಿ ವಲಯವು ಉದ್ಯೋಗ ಮತ್ತು ರಾಷ್ಟ್ರೀಯ ಆದಾಯಕ್ಕೆ ಸಲ್ಲಿಸುತ್ತಿರುವ ಕೊಡುಗೆಯನ್ನು ಗಮನಿಸಿದಾಗ ಕೃಷಿ ಕ್ಷೇತ್ರವು ಇತರ ವಲಯಗಳಿಗಿಂತ ಮುಂಚೂಣಿಯಲ್ಲಿರುತ್ತದೆ. ಸರ್ಕಾರವು ಕೃಷಿ ವಲಯವನ್ನು ಸುಧಾರಿಸಲು ಹತ್ತು ಹಲವು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದ್ದರೂ, ಅದು ಅನಿಶ್ಚಿತತೆಯಿಂದ ಹೊರಬಂದಿಲ್ಲ. ಏಕೆಂದರೆ, ಕೃಷಿಯು ಮಳೆ ಆಶ್ರಿತ ಹಾಗೂ ತೀವ್ರತರ ಸಂಕಷ್ಟಗಳಿಗೆ ತುತ್ತಾಗುವಂತಹ ಕ್ಷೇತ್ರವಾಗಿದೆ. ಅದರಲ್ಲೂ ಕೆಲವು ಪ್ರಮುಖ ಬೆಳೆಗಳಾದ ಹೂವು, ತರಕಾರಿ ಮತ್ತು ಹಣ್ಣು ಇವುಗಳಿಂದ ನಿರೀಕ್ಷಿಸುವಂತಹ ಇಳುವರಿ ಮತ್ತು ಆದಾಯವು ಅತಿ ಹೆಚ್ಚು ಏರಿತಳಿಗೆ ಒಳಪಟ್ಟಿರುತ್ತದೆ. ಈ ಬೆಳೆಗಳು ರೈತರಿಗೆ ಒಮ್ಮಮ್ಮೆ ಅತ್ಯಧಿಕ ಆದಾಯವನ್ನು ತಂದುಕೊಟ್ಟರೆ, ಕೆಲವೊಮ್ಮೆ ಸಂಪೂರ್ಣ ನಷ್ಟವನ್ನುಂಟುಮಾಡಿ ಅವರನ್ನು ಪಾತಾಳಕ್ಕೆ ತಳ್ಳುತ್ತದೆ. ಇನ್ನು ಕೆಲ ಸಂದರ್ಭದಲ್ಲಿ ರೈತರ ಆತ್ಮಹತ್ಯಗೆ ಕಾರಣವಾಗುತ್ತೆದೆ. ಅನಿರೀಕ್ಷಿತವಾಗಿ ಬಂದ ಕೊರೋನಾ–19 ಸಂಕ್ರಾಮಿಕ ರೋಗವು ರೈತರ ಆದಾಯವು ಕುಸಿಯಲು ಕಾರಣವಾಯಿತು. ಅದರಲ್ಲೂ ಕೂಡ ಹಣ್ಣು, ತರಕಾರಿ ಮತ್ತು ಹೂವು ಬೆಳೆಗಳನ್ನು ಬೆಳೆದ ರೈತರಂತೂ ಅತಿ ಹೆಚ್ಚು ನಷ್ಟವನ್ನು ಅನುಭವಿಸಿರುವುದು ಕಂಡುಬರುತ್ತದೆ. ಬೆಲೆ ಮತ್ತು ಬೇಡಿಕೆ ಕುಸಿತದಿಂದಾಗಿ, ರೈತರು ತಾವು ಬೆಳೆದ ಹಣ್ಣು ಮತ್ತು ತರಕಾರಿಗಳನ್ನು ರಸ್ತೆಯಲ್ಲಿ ಚಲ್ಲಿ ಪ್ರತಿಬಟಿಸಿದ ಉದಹಾರಣೆಗಳು ನಮ್ಮ ಕಣ್ಣ ಮುಂದಿವೆ. ಇನ್ನು ಕೆಲ ರೈತರು ತಮ್ಮ ಹೊಲ ಗದ್ದೆಗಳಲ್ಲಿಯೇ ಕಟಾವು ಮಾಡದೆ ಬಿಟ್ಟಿರುವಂತಹ ನಿದರ್ಶನಗಳು ಹೇರಳವಾಗಿ ಕಂಡುಬರುತ್ತವೆ. ಹೀಗೆ ಕೊರೋನಾ–19 ಸಂಕ್ರಾಮಿಕ ರೋಗವು ಮೇಲ್ನೋಟಕ್ಕೆ ಕೃಷಿ ವ್ರಲಯಕ್ಕೆ ಹೆಚ್ಚು ಪರಿಣಾಮ ಬೀರದಂತೆ ಕಂಡು ಬಂದರೂ ಅದು ಹೂವು, ಹಣ್ಣು ಮತ್ತು ತರಕಾರಿ ಬೆಳೆಗಳನ್ನು ಬೆಳೆಯುವ ರೈತರನ್ನು ತೀವ್ರತರವಾದ ಸಂಕಷ್ಟಕ್ಕೀಡು ಮಾಡಿರುತ್ತದೆ.

### *ಆಧಾರಗಳು*

1. AGRICULTURAL STATISTICS AT A GLANCE 2014, Government of India Ministry of Agriculture Department of Agriculture & Cooperation Directorate of Economics & Statistics.

2. Agricultural Census (various issues)

3. Agricultural Statistics at a Glance various issues (2019 & 2018) Government of India Ministry of Agriculture and Farmers Welfare Department of Agriculture, Cooperation and Farmers Welfare Directorate of Economics and Statistics

4. ANNUAL REPORT **(2020-21),** Department of Agriculture, Cooperation & Farmers' Welfare Ministry of Agriculture & Farmers' Welfare Government of India Krishi Bhawan, New Delhi-110 001 www.agricoop.nic.in

5. Population Census Report 2011, Government of India New Delhi.

6. The Economic Times, “Agriculture's share in GDP declines to 13.7% in 2012-13”, **PTI** Last August 30, 2013, 06:03 PMIST https://economictimes.indiatimes.com/news/economy/indicators/agricultures-share-in-gdp-declines-to-13-7-in-2012-13/articleshow/22163978.cms?utm_source=contentofinterest&utm_medium=text&utm_campaign=cppst